OS No. 26/2016
DW-3

(ಇಂದು ದಿಃ 05-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

**ಪಾಟೀ ಸವಾಲು :- ಶ್ರೀ. RM ವಕೀಲರಿಂದ :-**

5ನೇ ಪ್ರತಿವಾದಿ ಪೇಟ್ರೋಲ್ ಬಂಕ ಹೋದಿದ್ದಾರೆ ಎಂದರೆ ಸರಿ. ನಾನು ಸದರಿ ಪೇಟ್ರೋಲ ಬಂಕ್ ನಲ್ಲಿ ಸುಮಾರು 15 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಲ್ಲಿ ಕೆಲಸ ಮಾಡುತ್ತಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. Plaintiff No. 1(a) ಶರಣಪ್ಪ ನನಗೆ ಗೊತ್ತು. ನಾನು ಶರಣಪ್ಪನಿಗಿಂತ 10 ವರ್ಷ ಚಿಕ್ಕವನು ಎಂದರೆ ಚಿಕ್ಕವನು ನಿಜ ಆದರೆ ಎಷ್ಟು ಚಿಕ್ಕವನು ಗೊತ್ತಿಲ್ಲ. ನನಗೆ ಈಗ 68 ವರ್ಷ ವಯಸ್ಸು ಆಗಿಲ್ಲ ಎಂದರೆ ಸರಿಯಲ್ಲ. ವಾದಿಯರ ಮನೆ ಮತ್ತು 5ನೇಪ್ರತಿವಾದಿ ಮನೆ ಒಂದೇ ಏರಿಯಾದಲ್ಲಿವೆ ಎಂದರೆ ಸರಿ. ನನ್ನ ಮನೆ ಕೆರೆ ಬಳಿ ಇದೆ. ಕೆರೆಯಿಂದ ವಾದಿ ಮನೆ ಅರ್ಧ ಕೀ.ಮೀ ದೂರ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅರ್ಧ ಕೀ.ಮೀ. ಕ್ಕಿಂತ ಕಡಿಮೆ ಇದೆ ಎಂದು ಹೇಳುತ್ತಾರೆ. ನಾನು ಲಿಂಗಾಯತ ಸ್ವಾಮಿ ಸಮೂದಾಯದವನು ಎಂದರೆ ಸರಿ. ವಾದಿ ಕಬ್ಬಲಿಗ ಸಮುದಾಯದವರು ಎಂದರೆ ಸರಿ. ವಾದಿ ಮತ್ತು ಆತನ ಮಕ್ಕಳು ಹಳೆ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸರಿ. ವಾದಿಗೆ ಹಂದರಕಿ ರಸ್ತೆ ಕಡೆ ಒಂದು ಮನೆ ಇದೆ ಎಂದರೆ ಸರಿ. ಸದರಿ ಮನೆಯಲ್ಲಿ ಕಾಶಪ್ಪ ವಾಸ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಲಕ್ಷ್ಮಮ್ಮ ರವರ ತವರು ಮನೆ ಯಾವುದು ಅವರ ಮದುವೆ ಯಾವ ವರ್ಷ ಆಯಿತು ಹೇಳಲು ಆಗುವುದಿಲ್ಲ. ಬಸಮ್ಮಳ ಮದುವೆ ಯಾವ ವರ್ಷ ಮತ್ತು ಯಾವ ಸ್ಥಳದಲ್ಲಿ ಆಯಿತು ನನಗೆ ಗೊತ್ತಿಲ್ಲ. ಲಕ್ಷ್ಮಮ್ಮ ಮತ್ತು ಬಸಮ್ಮ ರವರ ಮದುವೆ ಆದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಭೀಮಪ್ಪ, ದ್ಯಾವಪ್ಪ ಮತ್ತು ಕಾಶಪ್ಪ 3 ಜನ ನನಗೆ ಗೊತ್ತು. ಭೀಮಪ್ಪ, ದ್ಯಾವಪ್ಪ ಮತ್ತು ಕಾಶಪ್ಪ ರವರ ಬಗ್ಗೆ ನನಗೆ ಮತ್ತು ಪ್ರತಿವಾದಿಯರ ಬಗ್ಗೆ ವೈಯಕ್ತಿಕ ಮಾಹಿತಿ ಇದೆ ಎಂದರೆ ಸರಿ. ಪರ್ವತರೆಡ್ಡಿ ಮತ್ತು ಭಿಮಪ್ಪ, ದ್ಯಾವಪ್ಪ ಮತ್ತು ಕಾಶಪ್ಪ ಮಾತನಾಡುತ್ತಾರೆ ಎಂದರೆ ಸರಿ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಬಣ್ಣ ರವರಿಗೆ ಇಬ್ಬರು ಹೆಂಡತಿಯರು ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಬಣ್ಣ ರವರಿಗೆ ಬಸಮ್ಮ ಒಬ್ಬಳೆ ಹೆಂಡತಿ ಎಂದರೆ ಸರಿಯಲ್ಲ. ಶರಣಪ್ಪ, ಶ್ರೀದೇವಿ ಮತ್ತು ಪದ್ಮಮ್ಮ ಬಸಮ್ಮಳ ಮಕ್ಕಳು ಎಂದರೆ ಸರಿ. ಲಕ್ಷಮ್ಮಳ ಮಕ್ಕಳಾದ ಭೀಮಣ್ಣ, ದ್ಯಾವಪ್ಪ ಮತ್ತು ಕಾಶಪ್ಪ ರವರು ಸಾಬಣ್ಣನ ಮಕ್ಕಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲದೆ ಇದ್ದರೂ ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ

ಸಂಬಂಧಿಕರು ಕೊಡ್ಲಾದಲ್ಲಿ ಕೂಡ ಇದ್ದಾರೆ ಎಂದರೆ ಸರಿ. ಕೊಡ್ಲಾದಲ್ಲಿರುವ ವಾದಿಯ ಸಂಬಂಧಿಕರ ಜೊತೆ ಪ್ರತಿವಾದಿಗಳು ಮಾತನಾಡುತ್ತಾರೆ ಎಂದರೆ ಸರಿ. ಪ್ರತಿವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**